ಅ) ಪ್ರವಾಸೋದ್ಯಮ ಇಲಾಖೆ ನಿರ್ಮಿಸಿರುವ ಕೆಲವು ಸೌಲಭ್ಯಗಳನ್ನು ಖಾಸಗೀ ಕರಣಗೊಳಿಸುವ ಅಥವಾ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಹೌದು

ಇ) ಕೇಂದ್ರಕ್ಕೆ ಸಲ್ಲಿಸಲಾಗಿರುವ ಈ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವಾಲಯ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಗೆ ಶಿಫಾರಸ್ಸು ಮಾಡಿದೆ. ಮುಂಬರುವ ಆರ್ಥಿಕ ವರ್ಷದಲ್ಲಿ ಈ ಯೋಜನೆಗೆ ಹಣ ಒದಗಿಸುವ ಬಗ್ಗೆ ಜಪಾನಿನ ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ. ಈ ಬಗ್ಗೆ ನಿರ್ಧಾರವನ್ನು ಇಷ್ಟರಲ್ಲೇ ತೆಗೆದುಕೊಳ್ಳುವ ನಿರೀಕ್ಷೆ ಇದೆ.

## ರಾಷ್ಟ್ರೀಯ ಹೆದ್ದಾರಿಗಳ ಯೋಜನೆಗಳು.

930. ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳ ರಚನೆಗೆ ಸರ್ಕಾರವು ಯೋಜನೆ ತಯಾರು ಮಾಡಿದೆ; ಅವುಗಳು ಯಾವುವು;

ಆ) ಇವುಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಮತ್ತು ಎಂದು ಮುಗಿಸಲಾಗುವುದು, ಹಾಗೂ ಇವುಗಳ ಎಷ್ಟು ಕಿಲೋಮೀಟರ್ ಉದ್ದ ಇರುತ್ತವೆ;

ಇ) ರಾಜ್ಯದಲ್ಲಿ ಎಷ್ಟು ಹಳ್ಳಿಗಳಿಗೆ ರಸ್ತೆ ಸಂಪರ್ಕ ಇಲ್ಲವಾಗಿದೆ;

ಈ) ಇವುಗಳ ಸಂಪರ್ಕವನ್ನು ಎಂದಿನಿಂದ ಕಲ್ಪಿಸಲಾಗುವುದು;

ಶ್ರೀ ಜಿ. ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) 13
ಪಟ್ಟಿ ಲಗತ್ತಿಸಲಾಗಿದೆ.

ಆ) ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಒಪ್ಪಿಗೆ ಇನ್ನೂ ದೊರೆತಿಲ್ಲವಾದ್ದರಿಂದ ಕೆಲಸವನ್ನು ಪ್ರಾರಂಭಿಸುವ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.
ಪಟ್ಟಿಯಲ್ಲಿ ಜೇಳಲಾದ 13 ರಸ್ತೆಗಳ ಒಟ್ಟು ಉದ್ದ 4400 ಕಿ. ಮೀಟರ್‌ಗಳು.

ಇ) ಕರ್ನಾಟಕ ರಾಜ್ಯದಲ್ಲಿ 27,023 ಹಳ್ಳಿಗಳಿದ್ದು, ಇವುಗಳ ಪೈಕಿ 208 ಹಳ್ಳಿಗಳಿಗೆ ರಸ್ತೆ ಸಂಪರ್ಕ ಇರುವುದಿಲ್ಲ.

ಈ) 8ನೇ ಪಂಚವಾರ್ಷಿಕ ಯೋಜನೆ (1992–93 ರಿಂದ 1997–98) ಯಲ್ಲಿ ಈ ಹಳ್ಳಿಗಳಿಗೆ ರಸ್ತೆಗಳನ್ನು ಹಂತ ಹಂತವಾಗಿ ನಿರ್ಮಿಸಲಾಗುವುದು. ಈ ಯೋಜನೆ ಮುಗಿಯುವ, ಅಂದರೆ 1997–98 ರ ವೇಳೆಗೆ ಎಲ್ಲಾ ಹಳ್ಳಿಗಳಿಗೂ ಸಂಪರ್ಕವನ್ನು ಕಲ್ಪಿಸಲಾಗುವುದು.

ಪಟ್ಟಿ

| ಕ್ರಮ ಸಂಖ್ಯೆ | ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು | ಉದ್ದ (ಕಿ.ಮೀ.) |
|---|---|---|
| 1. | ಆಂಧ್ರ ಪ್ರದೇಶದ ಕೊಂಚಿಯಿಂದ ಗುಂಟಾಕಲ್ - ಬಳ್ಳಾರಿ - ಹೊಸಪೇಟೆ - ಕೊಪ್ಪಳ್ - ಗದಗ್ - ಹುಬ್ಬಳ್ಳಿ - ಕಾರವಾರ (ಇವುಗಳನ್ನು ಸೇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 17) | 422 |

| ಕ್ರಮ ಸಂಖ್ಯೆ | ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು | ಉದ್ದ (ಕಿ.ಮೀ.) |
|---|---|---|
| 2. | ಬೆಂಗಳೂರು - ಮೈಸೂರು - ನಂಜನಗೂಡು - ಗುಂಡ್ಲುಪೇಟೆ - ಊಟಿ -ಕೊಯಮತ್ತೂರು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 47 ನ್ನು ತಮಿಳುನಾಡಿನಲ್ಲಿ ಸೇರುವಂತೆ) | 220 |
| 3. | ಮೈಸೂರು - ಶ್ರೀ ರಂಗಪಟ್ಟಣ - ನಾಗಮಂಗಲ - ಚಿಕ್ಕನಾಯಕನ ಹಳ್ಳಿ - ಹುಳಿಯಾರ್ - ಹಿರಿಯೂರ್ - ಬಳ್ಳಾರಿ - ಗುಲ್ಬರ್ಗಾ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ) | 678 |
| 4. | ತುಮಕೂರು - ಅರಸಿಕೆರೆ - ಶಿವಮೊಗ್ಗ - ಸಾಗರ - ಹೊನ್ನಾವರ (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ) | 332 |
| 5. | ಬೆಂಗಳೂರು - ಮೈಸೂರು - ಮಡಿಕೇರಿ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ) | 385 |
| 6. | ಬೆಳಗಾಂ - ಬಿಜಾಪುರ - ಗುಲ್ಬರ್ಗಾ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ) | 364 |
| 7. | ಬೆಳಗಾಂ - ಬಾಗಲ್ ಕೋಟ್ - ರಾಯಚೂರು - ಮೆಹಬೂಬ್ ನಗರ (ಆಂಧ್ರಪ್ರದೇಶದಲ್ಲಿ) | 336 |
| 8. | ಚಿತ್ರದುರ್ಗ - ಹೊಳಲ್ಕೆರೆ - ಹೊಸದುರ್ಗ - ಚಿಕ್ಕಮಗಳೂರು - ಮೂಡಿಗೆರೆ - ಬೆಳ್ತಂಗಡಿ - ಬಂಟ್ವಾಳ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ) | 283 |
| 9. | ಧಾರವಾಡ - ಲೋಂಡಾ - ಅನ್‌ಮೋದ್ - ಪಣಜಿ (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ ) | 95 |
| 10. | ಪಡುಬಿದ್ರಿ - ಕಾರ್ಕಳ - ಶೃಂಗೇರಿ - ತೀರ್ಥಹಳ್ಳಿ - ಶಿಕಾರಿಪುರ - ಶಿರಾಳ್ ಕೊಪ್ಪ - ಹುಬ್ಬಳ್ಳಿ - ಬಾಗಲ್ ಕೋಟ್ - ಹುನಗುಂದ . | 550 |
| 11. | ಶಿರಾ - (ಬೆಂಗಳೂರು - ಪೂನಾ ರಾಷ್ಟ್ರೀಯ ಹೆದ್ದಾರಿ ನಂ.4) ಮಧುಗಿರಿ - ಗೌರಿಬಿದನೂರು - ಚಿಕ್ಕಬಳ್ಳಾಪುರ - ಚಿಂತಾಮಣಿ - ಶ್ರೀನಿವಾಸಪುರ - ಮುಳಬಾಗಿಲು (ಬೆಂಗಳೂರು - ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ನಂ.4) | 160 |
| 12. | ಚಿತ್ರದುರ್ಗ - ಶಿವಮೊಗ್ಗ - ಸಕಲೇಶಪುರ - ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ | 325 |
| 13. | ಬೆಂಗಳೂರು - ಕನಕಪುರ - ಮಳವಳ್ಳಿ - ಮೈಸೂರು - ನಂಜನಗೂಡು - ಸುಲ್ತಾನ್ ಬತ್ತೇರಿ ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ | 250 |
| | ಒಟ್ಟು ಉದ್ದ 4400 ಕಿ. ಮೀ. | |

ರಾಜ್ಯದಲ್ಲಿ ಸಣ್ಣ ನೀರಾವರಿಯಡಿಯಲ್ಲಿ ಬಳಸಲಾದ ನೀರಿನ ಪ್ರಮಾಣ.

862. ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಸಣ್ಣ ನೀರಾವರಿಗಾಗಿ ಎಷ್ಟು ಟಿ.ಎಂ.ಸಿ. ನೀರನ್ನು ಉಪಯೋಗಿಸುತ್ತಿದ್ದೇವೆ ;
ಆ) ಇದರಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಿನ ಅನುಕೂಲವಾಗುತ್ತಿದೆ ;